# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:19.12.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.17 (ಜೆ ಪಿ ಪಾರ್ಕ್) ರಲ್ಲಿ ಶ್ರೀ. ಎ. ಬಿ. ದೊಡ್ಡಯ್ಯ, (ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದವರು:-

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ | ಹಾಜರಿದ್ದರು |
|---|---|---|---|
| 1 | ಶ್ರೀ ಎ. ಬಿ. ದೊಡ್ಡಯ್ಯ | ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು |
| 2 | ಶ್ರೀ ಅಜಗಣ್ಣಯ್ಯ ಸ್ವಾಮಿ | ಸಹಾಯಕ ಅಭಿಯಂತರರು | ಹಾಜರಿದ್ದರು |
| 3 | ಡಾ॥ ಚೇತನ್ | ವೈದ್ಯಾಧಿಕಾರಿಗಳು | ಹಾಜರಿದ್ದರು |
| 4 | ಶ್ರೀ ರಮೇಶ್ | ಹಿ. ಆ. ಪ. | ಹಾಜರಿದ್ದರು |
| 5 | ಶ್ರೀ ಸೋಮಶೇಖರ್ ಎಸ್. | ಕಿ. ಆ. ಪ. | ಹಾಜರಿದ್ದರು |
| 6 | ಶ್ರೀ ರಾಜಶೇಖರ್ | ಬೆಸ್ಕಾಂ | ಹಾಜರಿದ್ದರು |
| 7 | ಶ್ರೀ ರಂಗರಾಜು | ಬೆಸ್ಕಾಂ | ಹಾಜರಿದ್ದರು |
| 8 | ಶ್ರೀ ಅವಿನಾಶ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಿದ್ದರು |
| 9 | ಶ್ರೀ ಆಶೀರ್ವಾದ | 17/ಬಿ, ಮೇಲ್ವಿಚಾರಕರು | ಹಾಜರಿದ್ದರು |
| 10 | ಶ್ರೀ ಎಂ. ಸಿ. ವಿಲ್ಸನ್ | ಮೇಲ್ವಿಚಾರಕರು | ಹಾಜರಿದ್ದರು |
| 11 | ಶ್ರೀ ವೆಂಕಟೇಶ್ | ಮೇಲ್ವಿಚಾರಕರು | ಹಾಜರಿದ್ದರು |
| 12 | ಬಸವರಾಜು | ವಾರ್ಡ್-17/ಸಿ ಮೇಲ್ವಿಚಾರಕರು | ಹಾಜರಿದ್ದರು |
| 13 | ಶ್ರೀ ಮುರಳಿ | ಮೇಲ್ವಿಚಾರಕರು | ಹಾಜರಿದ್ದರು |
| 14 | ನಾಗೇಗೌಡ | ಮೇಲ್ವಿಚಾರಕರು | ಹಾಜರಿದ್ದರು |
| 15 | ಅಲಿಸ್ಟರ್ | ಮೇಲ್ವಿಚಾರಕರು | ಹಾಜರಿದ್ದರು |
| 16 | ಅಭಿಷೇಕ್ | ಮಾರ್ಷಲ್ | ಹಾಜರಿದ್ದರು |
| 17 | ಹಾಗೂ ಇತರೆ ಸಾರ್ವಜನಿಕರು ಹಾಜರಿದ್ದರು | | |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

Scanned with CamScanner

**1) ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಶೌಚಾಲಯಗಳ ಬಗ್ಗೆ:-**

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ವಾರ್ಡ್ ವ್ಯಾಪ್ತಿಯಲ್ಲಿ ಒಳಪಡುವ ಎಲ್ಲಾ ಪ್ರದೇಶಗಳಲ್ಲಿ ಸರ್ವೆ ಕಾರ್ಯ ಕೈಗೊಂಡಿದ್ದು, ಹಾಲಿ ಇರುವ ಸಾರ್ವಜನಿಕ ಶೌಚಾಲಯಗಳ ಪರಿವೀಕ್ಷಣೆ ಮಾಡಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ. | ವಿವರಗಳು | ಷರಾ |
|---|---|---|
| | **ಪಾದಚಾರಿ ಮಾರ್ಗ** | |
| 1 | ಎಂ. ಎಸ್. ರಾಮಯ್ಯ ರಸ್ತೆ (ಗೋಕುಲ ಮೇಲ್ಸೇತುವೆಯಿಂದ ಬಿ.ಇ.ಎಲ್. ವೃತ್ತದವರೆಗೆ) | ಹಾಲಿ ಇರುವ ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸುವುದು |
| 2 | ಪೂರ್ಣಪುರ ಮುಖ್ಯರಸ್ತೆ | ಹೊಸ ಪಾದಚಾರಿ ಮಾರ್ಗ ನಿರ್ಮಾಣ |
| 3 | ಎಂ.ಇ.ಎಸ್. ರಸ್ತೆ | ಹೊಸ ಪಾದಚಾರಿ ಮಾರ್ಗ ನಿರ್ಮಾಣ |
| 4 | ಟ್ಯಾಂಕ್‌ಬಂಡ್ ರಸ್ತೆ | ಹಾಲಿ ಇರುವ ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸುವುದು |
| 5 | ಬಿ. ವಿ. ಶ್ರೀನಿವಾಸ್ ರಸ್ತೆ, ಬಂಡಪ್ಪ ಗಾರ್ಡನ್ | ಒಡೆದು ಹೋದ ಕೆಲವೊಂದು ಹಾಸುಗಲ್ಲುಗಳನ್ನು ಪುನ: ಅಳವಡಿಸುವುದು. |
| 6 | ಜೋಡಿ ರಸ್ತೆ | ಹಾಲಿ ಇರುವ ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸುವುದು ಹಾಗೂ ಒಡೆದು ಹೋದ ಕೆಲವೊಂದು ಹಾಸುಗಲ್ಲುಗಳನ್ನು ಪುನ: ಅಳವಡಿಸುವುದು. |
| 7 | 12ನೇ ಮುಖ್ಯರಸ್ತೆ, ಗೋಕುಲ | ಒಡೆದು ಹೋದ ಕೆಲವೊಂದು ಹಾಸುಗಲ್ಲುಗಳನ್ನು ಪುನ: ಅಳವಡಿಸುವುದು. |
| 8 | 3ನೇ ಅಡ್ಡರಸ್ತೆ, ಮೋಹನಕುಮಾರನಗರ | ಒಡೆದು ಹೋದ ಕೆಲವೊಂದು ಹಾಸುಗಲ್ಲುಗಳನ್ನು ಪುನ: ಅಳವಡಿಸುವುದು. |
| 9 | 15ನೇ ಬಿ ಮುಖ್ಯರಸ್ತೆ, ಬಂಡಪ್ಪ ಗಾರ್ಡನ್ | ಒಡೆದು ಹೋದ ಕೆಲವೊಂದು ಹಾಸುಗಲ್ಲುಗಳನ್ನು ಪುನ: ಅಳವಡಿಸುವುದು. |
| | **ಶೌಚಾಲಯಗಳ ವಿವರ** | |
| | **ವಾರ್ಡ್ 17ರಲ್ಲಿ ಹಾಲಿ ಮೂರು ಸಾರ್ವಜನಿಕ ಶೌಚಾಲಯಗಳಿದ್ದು, ಒಂದು ಸುಸ್ಥಿತಿಯಲ್ಲಿರುತ್ತದೆ. ಇನ್ನುಳಿದ ಎರಡು ಶೌಚಾಲಯಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ.** | |
| 1 | ಚೌಡೇಶ್ವರಿ ಬಸ್ ನಿಲ್ದಾಣದ ಹತ್ತಿರ | |
| 2 | ಪೂರ್ಣಪುರ | ನವೀಕರಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 3 | ಎಂ.ಇ.ಎಸ್. ರಸ್ತೆ | ಹೊಸ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| | **ಹೊಸದಾಗಿ ಅವಶ್ಯಕತೆ ಇರುವ ಸಾರ್ವಜನಿಕ ಶೌಚಾಲಯ ನಿರ್ಮಿಸಬೇಕಾದ ಪ್ರದೇಶಗಳು** | |
| 4 | ಮೋಹನ್‌ಕುಮಾರನಗರ | |
| 5 | ಹೆಚ್.ಎಂ.ಟಿ.ಬಡಾವಣೆ | |
| 6 | ಬಂಡಪ್ಪ ಗಾರ್ಡನ್ | |
| 7 | ಎಸ್.ಬಿ.ಎಂ. ಕಾಲೋನಿ | |

Scanned with CamScanner

## 2) ಭಿಕ್ಷಾಟನೆ ಮಾಡುವವರು, ವಸತಿ ನಿರ್ಗತಿಕರನ್ನು ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ವರದಿ ನೀಡುವ ಬಗ್ಗೆ:-

ನೋಡಲ್ ಅಧಿಕಾರಿಗಳು ಪ್ರಸ್ತಾಪಿತ ವಿಷಯದ ಬಗ್ಗೆ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಭಿಕ್ಷಾಟನೆ ಮಾಡುವವರು, ವಸತಿ ನಿರ್ಗತಿಕರನ್ನು ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ, ಸರ್ವೆ ಮಾಡಲು ಸಂಬಂಧಪಟ್ಟ ಇಂಜಿನಿಯರ್, ಆರೋಗ್ಯ ವಿಭಾಗ, ಕಂದಾಯ ವಿಭಾಗ, ಸಮಾಜ ಕಲ್ಯಾಣ ವಿಭಾಗ, ಪೋಲಿಸ್ ಇಲಾಖೆಯವರುಗಳೊಂದಿಗೆ ಸಮನ್ವಯ ಸಾಧಿಸಿ, ಜಂಟಿಯಾಗಿ ವರದಿ ಸಲ್ಲಿಸಬೇಕಾಗಿರುವುದರಿಂದ ಎಲ್ಲಾ ಇಲಾಖೆಯವರನ್ನೊಳಗೊಂಡಂತೆ ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸಿ, ಆ ಕೂಡಲೇ ಕಾರ್ಯರೂಪಕ್ಕೆ ತರುವುದಾಗಿ ಸಭೆಗೆ ತಿಳಿಸಿರುತ್ತಾರೆ.

## 3) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-

- ಮತ್ತಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಮತ್ತಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ವಯಂ ಪ್ರೇರಿತರಾಗಿ ರೋಗ ಲಕ್ಷಣಗಳಿರುವ ಸಾರ್ವಜನಿಕರಿಗೆ ಸುಮಾರು 280 ರಿಂದ 300 ಜನರಿಗೆ ಪ್ರತಿದಿನ ಕೋವಿಡ್ ಪರೀಕ್ಷೆ ನಡೆಸುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು.

ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನಜಾಗೃತಿ ಮೂಡಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು. ಜೊತೆಗೆ ಬೀದಿ ಬೀದಿಗಳಲ್ಲಿ ತಳ್ಳುವ ಗಾಡಿ ಮತ್ತು ಇತರೆ ವಾಣಿಜ್ಯ ಚಟುವಟಿಕೆದಾರರಿಗೆ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಸಭೆಯಲ್ಲಿ ಚರ್ಚಿಸಲಾಯಿತು.

## 3. ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆ:-

10ನೇ ಮುಖ್ಯರಸ್ತೆ, ವೆಂಕಟಮ್ಮ ರಾಮಯ್ಯ ಬಡಾವಣೆಲ್ಲಿರುವ ಮ್ಯಾನ್‌ಹೋಲ್‌ನ ಮುಚ್ಚುಗಲ್ಲು ಹಾಳಾಗಿರುವುದರಿಂದ ರಸ್ತೆಯಲ್ಲಿ ಓಡಾಡುವ ವಾಹನಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ತ್ವರಿತವಾಗಿ ದರಸ್ತಿಗೊಳಿಸಲು ಕೂಡಲೇ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

## 4. ಬಿಬಿಎಂಪಿ ಅರಣ್ಯ ಇಲಾಖೆ:

ಮತ್ತಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ವಾರ್ಡ್-17ರ ವ್ಯಾಪ್ತಿಯಲ್ಲಿ ಕೆಲವೊಂದು ಹಳೆಯ ಮರಗಳಿದ್ದು, ಬೀಳುವ ಹಂತದಲ್ಲಿರುತ್ತದೆ ಹಾಗೂ ಕೆಲವು ಮರದ ರೆಂಬೆಗಳು ಒಣಗಿ ಹೋಗಿದ್ದು, ದಾರಿಯಲ್ಲಿ ಓಡಾಡುವ ಸಾರ್ವಜನಿಕರ ಮೇಲೆ ಬೀಳುವ ಸ್ಥಿತಿಯಲ್ಲಿರುತ್ತದೆ. ಇದರ ಬಗ್ಗೆ ಸಾರ್ವಜನಿಕರು ಸಭೆಯಲ್ಲಿ ದೂರು ನೀಡಿದ್ದು, ಇಂತಹ ಮರಗಳನ್ನು ಹಾಗೂ ಮರದ ರೆಂಬೆಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಇವರಿಗೆ ದೂರವಾಣಿ ಮುಖೇನ ತಿಳಿಸಿದರು.

Scanned with CamScanner

5. ಕಂದಾಯ ವಿಭಾಗ:

ವಾರ್ಡ್-17ರ ವ್ಯಾಪ್ತಿಯಲ್ಲಿ ಕಂಡುಬರುವ ಖಾಲಿ ನಿವೇಶನಗಳಲ್ಲಿ ಸಾರ್ವಜನಿಕರು ಕಸ ಸುರಿಯುತ್ತಿರುವುದು ಕಂಡುಬರುತ್ತಿದ್ದು, ಅಂತಹ ಜಾಗಗಳಲ್ಲಿ ಬ್ಲ್ಯಾಕ್‌ಸ್ಪಾಟ್ ನಿರ್ಮಾಣವಾಗುತ್ತಿರುತ್ತದೆ. ಸಂಬಂಧಪಟ್ಟ ನಿವೇಶನದ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲು. ಕಂದಾಯ ಇಲಾಖೆಯವರು ವಾರ್ಡ್-17ರಲ್ಲಿ ಕಂಡುಬರುವ ಖಾಲಿ ನಿವೇಶನಗಳ ವಿವರಗಳನ್ನು ಇಂಜಿನಿಯರಿಂಗ್ ವಿಭಾಗಕ್ಕೆ ನೀಡಬೇಕೆಂದು ಅಧ್ಯಕ್ಷರು ತಿಳಿಸಿದರು.

6) ಮಾಸ್ಕ್ ಹಾಕದಿರುವ ವ್ಯಕ್ತಿಗಳಿಗೆ ದಂಡ ವಿಧಿಸುವ ಬಗ್ಗೆ:-

ಪ್ರಸ್ತಾಪಿತ ವಿಷಯದ ಬಗ್ಗೆ ಮಾರ್ಷಲ್‌ಗಳೊಂದಿಗೆ ಚರ್ಚಿಸಲಾಗಿದ್ದು, ವಿದೇಶಗಳಲ್ಲಿ ಕೊರೋನಾ ರೂಪಾಂತರ ಹೊಂದಿರುವ ಬಗ್ಗೆ ವರದಿಯಾಗಿದ್ದು, ಮುಂಜಾಗ್ರತಾ ಕ್ರಮವಾಗಿ ವಾರ್ಡ್‌ನಲ್ಲಿ ಮಾಸ್ಕ್ ಹಾಕದಿರುವ ಸಾರ್ವಜನಿಕರಿಗೆ ಸರ್ಕಾರದ ಆದೇಶದ ರೀತ್ಯಾ ಕಟ್ಟುನಿಟ್ಟಾಗಿ ದಂಡ ವಿಧಿಸಲು ಸೂಚಿಸಲಾಯಿತು.

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್‌ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

24/12/2020
(ಅಜಗಣ್ಣಯ್ಯ ಸ್ವಾಮಿ)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:17

24/12/20
(ಬಿ. ಟಿ. ದೊಡ್ಡಯ್ಯ)
ಮುಖ್ಯ ಅಭಿಯಂತರರು ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:17

Scanned with CamScanner

Scanned with CamScanner